**SLPM-D-KND**

# ಕನ್ನಡ / KANNADA

## ಪತ್ರಿಕೆ II / Paper II

## (ಸಾಹಿತ್ಯ) / ( LITERATURE )

ವೇಳೆ : ಮೂರು ಗಂಟೆ
*Time Allowed : **Three Hours***

ಗರಿಷ್ಠ ಅಂಕಗಳು : **250**
*Maximum Marks : **250***

---

### ಪ್ರಶ್ನೆ ಪತ್ರಿಕೆ ವಿಶೇಷ ಸೂಚನೆಗಳು

**ದಯವಿಟ್ಟು ಪ್ರಶ್ನೆಗಳಿಗೆ ಉತ್ತರಿಸುವ ಮೊದಲು ಕೆಳಗಿನ ಪ್ರತಿಯೊಂದು ಸೂಚನೆಗಳನ್ನು ಸರಿಯಾಗಿ ಓದಿರಿ :**

ಇದರಲ್ಲಿ **ಎಂಟು** ಪ್ರಶ್ನೆಗಳಿದ್ದು **ಎರಡು** ಭಾಗಗಳಲ್ಲಿ ವಿಂಗಡಿಸಲಾಗಿದೆ.

ಅಭ್ಯರ್ಥಿಗಳು ಎಲ್ಲಾ ಪ್ರಶ್ನೆಗಳಲ್ಲಿ **ಐದು** ಪ್ರಶ್ನೆಗಳಿಗೆ ಉತ್ತರಿಸಬೇಕು.

ಅಭ್ಯರ್ಥಿಗಳು ಪ್ರಶ್ನೆಗಳ ಸಂಖ್ಯೆ ***1*** ಮತ್ತು **5**ಕ್ಕೆ ಉತ್ತರಿಸುವುದು ಕಡ್ಡಾಯ, ಮತ್ತು ಇನ್ನುಳಿದ **ಮೂರು** ಪ್ರಶ್ನೆಗಳಲ್ಲಿ ಪ್ರತಿಯೊಂದು ವಿಭಾಗದಿಂದ ಕನಿಷ್ಠ **ಒಂದು** ಪ್ರಶ್ನೆಗಾದರೂ ಉತ್ತರಿಸಬೇಕು.

ಪ್ರತಿಯೊಂದು ಪ್ರಶ್ನೆಗಳಿಗಿರುವ ಅಂಕಗಳನ್ನು ಆಯಾ ಪ್ರಶ್ನೆಗಳ ಮುಂದೆಯೇ ನಮೂದಿಸಲಾಗಿದೆ.

ಉತ್ತರಗಳನ್ನು ಅತ್ಯಗತ್ಯವಾಗಿ **ಕನ್ನಡದಲ್ಲೇ (ಕನ್ನಡ ಲಿಪಿಯಲ್ಲೇ)** ಬರೆಯಬೇಕು.

ಕೆಲವು ಪ್ರಶ್ನೆಗಳಿಗೆ ಉತ್ತರಿಸಲು ನಿರ್ದಿಷ್ಟಪಡಿಸಿದ ಶಬ್ದಗಳ ಮಿತಿಯನ್ನು ಸರಿಯಾಗಿ ಪಾಲಿಸಬೇಕು.

ಉತ್ತರಿಸಿದ ಪ್ರಶ್ನೆಗಳನ್ನು ಕ್ರಮಬದ್ಧವಾಗಿ ಪರಿಗಣಿಸಿ ಎಣಿಕೆ ಮಾಡಲಾಗುವುದು. ಅಪೂರ್ಣ ಉತ್ತರಗಳನ್ನು ಹೊಡೆದು ಹಾಕದಿದ್ದಲ್ಲಿ ಅವುಗಳನ್ನು ಎಣಿಕೆಯಲ್ಲಿ ಪರಿಗಣಿಸಲಾಗುತ್ತದೆ. ಪ್ರಶ್ನೋತ್ತರ ಸಹಿತವಾಗಿರುವ ಪುಸ್ತಿಕೆಯಲ್ಲಿ ಬರೆಯದೆ ಉಳಿದ ಪೂರ್ಣ ಖಾಲಿ ಪುಟಗಳನ್ನು ಮತ್ತು ಭಾಗಶಃ ಖಾಲಿ ಇರುವ ಪುಟಗಳನ್ನು ಸ್ಪಷ್ಟವಾಗಿ ಹೊಡೆದು ಹಾಕಬೇಕು.

### Question Paper Specific Instructions

***Please read each of the following instructions carefully before attempting questions :***

*There are **EIGHT** questions divided in **TWO SECTIONS**.*

*Candidate has to attempt **FIVE** questions in all.*

*Questions no. **1** and **5** are compulsory and out of the remaining, any **THREE** are to be attempted choosing at least **ONE** question from each section.*

*The number of marks carried by a question / part is indicated against it.*

*Answers must be written in **KANNADA (Kannada script)**.*

*Word limit in questions, wherever specified, should be adhered to.*

*Attempts of questions shall be counted in sequential order. Unless struck off, attempt of a question shall be counted even if attempted partly. Any page or portion of the page left blank in the Question-cum-Answer Booklet must be clearly struck off.*

---

## SECTION A

**Q1.** ಈ ಕೆಳಗಿನ ಪದ್ಯಗಳ ಸಂದರ್ಭವನ್ನು ಸೂಚಿಸಿ ಅವುಗಳ ಭಾವ ಮತ್ತು ಸ್ವಾರಸ್ಯವನ್ನು ಕುರಿತು ಬರೆಯಿರಿ. (ಪ್ರತಿಯೊಂದೂ 150 ಪದಗಳ ಉತ್ತರ ಮಿತಿಯಲ್ಲಿ) *10×5=50*

(a) ಕಲಿಯನೆ ಪಂದೆ ಮಾಳ್ಕಿ ಕಡುವಂದಿಯನೊಳ್ಗಲಿ ಮಾಳ್ಕಿ ತಕ್ಕನಂ
ಪೊಲೆಯನೆ ಮಾಳ್ಕಿ ಮುಂ ಪೊಲೆಯನಂ ನೆಱೆ ತಕ್ಕನೆ ಮಾಳ್ಕಿ
ಗ್ಗಲಿಸಿ ಪೊದಮ್ದಿ ಪರ್ವಿದ ವಿವೇಕತೆಯಿಂ ನೃಪಚಿತ್ತ ವೃತ್ತಿ ಚಂ
ಚಲಮದರಿಂದಮೋಲಗಿಸಿ ಬಾಮ್ವಿದೆ ಕಷ್ಟಮಿಳಾಧಿ ನಾಥರಂ ॥ *10*

(b) ಗಗನದೊಳು ನಿಂದು ನೋಡು ನೋಡು ಪಾರ್ವತಿ ನಿನ್ನ ಪರವೆಯ
ರೂಪುಮನೆನ್ನ ನಂಬಿಯಣ್ಣನ ವಿಳಾಸಮಂ ಇವರಿರ್ವರ ಸುಖದೋ-
-ಚೆಯನೀ ಜಗತ್ರಯಂ ಮೆಚ್ಚೆ ಪೂಜೆಯಾಗಿ ಕೈಕೊಂಡಪೆಂ
ಇವರಿರ್ವರ ಸುಖನಿಮಿತ್ತವಾನುಂ ನೀನುವಿನಿತು ಬೇಗಂ
ಬಿಯ್ಯಗರಾಗಿರ್ಪವೆಂದು ವಿನೋದದಿಂ ಮೃಡಂ ನುಡಿವುತ್ತಿರೆ. *10*

(c) ಕಾಳಿದಾಸನ ಮನೆಯ ಕೀಳುದಾಸ ನಾನಯ್ಯ
ಆಳು ದಾಸನು ನಾನು ಮೂಳ ದಾಸ
ಫಾಲಾಕ್ಷ ಸಖ ನಿನ್ನ ಭಜಿಪ ಭಕ್ತರ ಮನೆಯ
ಆಳಿನಾಳಿನ ದಾಸ ನಿಡಿದಾಸ ನಾನಯ್ಯ ॥ *10*

(d) ಭೋಗ ವಿಚಾರವು ಬೇಕು ನೃಪತಿಗಾತ್ಮ
ಯೋಗ ವಿಚಾರವು ಬೇಕು ।
ರಾಗ ರಸಿಕನಾಗಬೇಕು ಭಾವಿಸೆ ವೀತ
ರಾಗ ರಸಿಕನಾಗ ಬೇಕು ॥ *10*

(e) ಕೊಟ್ಟ ಭಾಷೆಗೆ ಮರಳಿ ಬಾಣವ
ತೊಟ್ಟನೇ ತಾನೊಡೆಯನೆಂದರೆ
ಯಟ್ಟಿದನೆ ಪಾಂಡವರೊಳನು ಸಂಧಾನವನು ಬಿಸುಟು
ನಟ್ಟ ಕಣೆಗಳುಕಿದನೆ ಕೌರವ
ಕೆಟ್ಟನಕಟಕಟೆಂದು ಕಾಯವ
ಬಿಟ್ಟ ಕರ್ಣನೊಳಾರು ಸರಿಯೆನುತಿರ್ದುದಮರಗಣ ॥ *10*

**Q2.** ಕೆಳಗಿನ ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಿ :

(a) ಭೀಮನು ತನ್ನ ಹಾಗೂ ದ್ರೌಪದಿಯ ಪ್ರತಿಜ್ಞೆಯನ್ನು ಪೂರೈಸಿಕೊಂಡ ಸನ್ನಿವೇಶವು ವಿಕ್ರಮಾರ್ಜುನ ವಿಜಯದಲ್ಲಿ ಹೇಗೆ ನಿರೂಪಿತವಾಗಿದೆ ? ವಿವರಿಸಿ. 20

(b) ವಿದ್ಯುಚ್ಚೋರನ ಕಥೆಯಲ್ಲಿ ಅಂದಿನ ಸಮಾಜದಲ್ಲಿ ಕಾವಲು ಮತ್ತು ನ್ಯಾಯಾಂಗ ವ್ಯವಸ್ಥೆಯ ಚಿತ್ರಣ ಹೇಗೆ ಮೂಡಿ ಬಂದಿದೆ ? ವಿವರಿಸಿ. 20

(c) ಜಾತಿ ವ್ಯವಸ್ಥೆಯನ್ನು ವಚನಕಾರರು ಪ್ರಶ್ನಿಸಿರುವ ರೀತಿಯನ್ನು ಉದಾಹರಣೆಗಳೊಂದಿಗೆ ವಿವರಿಸಿ. 10

**Q3.** ಕೆಳಗಿನ ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಿ :

(a) ರತ್ನಾಕರ ವರ್ಣಿಯು 'ಭರತೇಶ ವೈಭವವನ್ನು ವೈಭವದ ಕಥೆಯಾಗಿಸಲು ಪ್ರಯತ್ನಿಸಿದರೂ ಅದು 'ಆಧ್ಯಾತ್ಮ ರಸ' ಪ್ರತಿಪಾದನೆಯಲ್ಲಿ ಪರ್ಯವಸಾನಗೊಂಡ ಬಗೆಯನ್ನು ಚರ್ಚಿಸಿ. 20

(b) ಕನಕದಾಸರ ಸಮಾಜದ ಕಳಕಳಿಯನ್ನು ಕನಕ ಸಾಹಿತ್ಯದ ಹಿನ್ನೆಲೆಯಲ್ಲಿ ವಿವರಿಸಿ. 20

(c) ಸುಕುಮಾರ ಸ್ವಾಮಿಯ ಕಥೆಯು ಅನಾವರಣ ಮಾಡುವ ಸಮಕಾಲೀನ ವಿದ್ಯಾಭ್ಯಾಸದ ವಿವರಗಳು. 10

**Q4.** ಕೆಳಗಿನ ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಿ :

(a) ಹರಿಹರನ ರಗಳೆಗಳಲ್ಲಿ ನಂಬಿಯಣ್ಣನ ರಗಳೆ ವಿಶಿಷ್ಟವಾದುದು ಎಂದು ವಿದ್ವಾಂಸರು ಹೇಳಲು ಕಾರಣವೇನು ? 20

(b) ಕರ್ಣನ ಬದುಕಿನ ಘನತೆಯನ್ನು ಕುಮಾರವ್ಯಾಸನು ಹೇಗೆ ಅನಾವರಣಗೊಳಿಸಿದ್ದಾನೆ ? 20

(c) ವಚನಕಾರ್ತಿಯರ ವಚನಗಳಲ್ಲಿ ಕಂಡು ಬರುವ ಪ್ರತಿಮೆಗಳನ್ನು ಕುರಿತು ಚರ್ಚಿಸಿ. 10

## SECTION B

**Q5.** ಈ ಕೆಳಗಿನವುಗಳನ್ನು ಕುರಿತು ಟಿಪ್ಪಣಿ ಬರೆಯಿರಿ.

(ಪ್ರತಿಯೊಂದು 150 ಪದಗಳ ಮಿತಿಯ ಉತ್ತರವಾಗಲಿ) *10×5=50*

(a) ಮಾಸ್ತಿಯವರ 'ಮೊಸರಿನ ಮಂಗಮ್ಮ' ಕತೆಯಲ್ಲಿ ಕುಟುಂಬ ವಿಘಟನೆಯ ಸಮಸ್ಯೆ. *10*

(b) ಹೊಸಗನ್ನಡ ಕವಿತೆಗಳಲ್ಲಿ ಕಂಡು ಬರುವ ಅಭಿವ್ಯಕ್ತಿ ಸ್ವಾತಂತ್ರ್ಯ. *10*

(c) 'ಒಡಲಾಳ' ದಲಿತ ಬದುಕಿಗೆ ಬರೆದ ವ್ಯಾಖ್ಯಾನ. ವಿವರಿಸಿ. *10*

(d) 'ರೂದ್ರ ತಪಸ್ಸಿ' ನಾಟಕದಲ್ಲಿ ಜಾತಿ ವ್ಯವಸ್ಥೆಯ ವಿರುದ್ಧ ಎತ್ತಿರುವ ಧ್ವನಿ. *10*

(e) ಗಾದೆಗಳು ಬಿಂಬಿಸುವ 'ಮಹಿಳೆ'. *10*

**Q6.** ಕೆಳಗಿನ ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಿ :

(a) 'ಕನ್ನಡ ಜನಪದ ಸಾಹಿತ್ಯ'ದ ಸ್ವರೂಪ ಲಕ್ಷಣಗಳನ್ನು ಹಾ.ಮಾ. ನಾಯಕರ 'ಜನಪದ ಸ್ವರೂಪ' ಕೃತಿಯ ಆಧಾರದದಿಂದ ನಿರೂಪಿಸಿ. *20*

(b) ಇತಿಹಾಸ ಮತ್ತು ವರ್ತಮಾನದ ಸಂಕಥನವಾಗಿ 'ತುಘಲಕ್' ನಾಟಕವು ಯಶಸ್ವಿಯಾಗಿದೆಯೇ ? ಚರ್ಚಿಸಿ. *20*

(c) ಜನಪದ ಗೀತೆಗಳಲ್ಲಿ ಕಂಡು ಬರುವ ಸಾಮಾಜಿಕ ಜೀವನ ಮೌಲ್ಯಗಳು. *10*

**Q7.** ಕೆಳಗಿನ ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಿ :

(a) 'ಮನುಕುಲಕ್ಕೆ ನನ್ನಂಥ ನಿರೀಶ್ವರವಾದಿಗಳೂ ಸೇರಿದಂತೆ, ಕರುಣಾರ್ದ್ರ ಹೃದಯನೂ, ಪ್ರೇಮ ಸ್ವರೂಪಿಯೂ ಆದ ದೇವರು ಬೇಕು !' - ಎ.ಎನ್. ಮೂರ್ತಿರಾಯರ ಈ ಮಾತುಗಳನ್ನು ಕುರಿತು ಚರ್ಚಿಸಿ. *20*

(b) ನವೋದಯ ಕಾವ್ಯದ ಲಕ್ಷಣಗಳನ್ನು ಉದಾಹರಣೆಗಳೊಂದಿಗೆ ಗುರುತಿಸಿ. *20*

(c) ಒಗಟುಗಳಲ್ಲಿ ಕಂಡು ಬರುವ ಜಾನಪದ ಬೌದ್ಧಿಕ ಸೂಕ್ಷ್ಮತೆಗಳನ್ನು ಉದಾಹರಣೆಗಳ ಮೂಲಕ ಸ್ಪಷ್ಟ ಪಡಿಸಿ. *10*

**Q8.** ಕೆಳಗಿನ ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಿ :

(a) ಕನ್ನಡ ಸಣ್ಣಕಥೆಗಳ ಬೆಳವಣಿಗೆ ಮತ್ತು ಅವುಗಳ ಲಕ್ಷಣಗಳನ್ನು ವಿವರಿಸಿ. *20*

(b) ಪೌರಾಣಿಕ ಚೌಕಟ್ಟನ್ನು ಹೊಂದಿದ್ದರೂ 'ಮಾಧವಿ' ಕಾದಂಬರಿಯ ಸಮಕಾಲೀನ ಪುರುಷ ಪ್ರಧಾನ ಸಮಾಜದ ಮೌಲ್ಯಗಳನ್ನು ಪ್ರತಿಬಿಂಬಿಸುತ್ತದೆ. ಚರ್ಚಿಸಿ. *20*

(c) 'ಜನಪದ ಕಥೆಗಳು' ಜನಪದರ ಸೃಜನಶೀಲತೆಯ ವಿವಿಧ ಆಯಾಮಗಳನ್ನು ಪ್ರತಿಬಿಂಬಿಸುತ್ತವೆ. ವಿಷದೀಕರಿಸಿ. *10*